

### ಸ್ಟಾರ್‌ಗಳು ಯಾರನ್ನೂ ಬೆಳೆಸಲಿಲ್ಲ

ಕನ್ನಡದ ಅನುಭವಿ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಪ್ರಕಾರ, ಹಿಂದಿ ಚಿತ್ರರಂಗದ ಬೆರಳೆಣಿಕೆಯಷ್ಟು ತಾರಾನಟರು ಇನ್ನೊಂದು ತಲೆಮಾರಿನ ವರ್ಚಸ್ವಿ ನಟರನ್ನು ಸೃಷ್ಟಿಸಲೇ ಇಲ್ಲ. ರಣವೀರ್ ಸಿಂಗ್ ಒಬ್ಬರು ಸ್ವಂತ ಕಷ್ಟದಿಂದ, ಬಲದಿಂದ ಮೇಲೆ ಬಂದರು. ಅದಕ್ಕೆ ಹೊರತಾಗಿ ಅಲ್ಲಿ ಯಾವ್ಯಾವುದೋ ಶಕ್ತಿಗಳು ಪ್ರತಿಭೆಗಳನ್ನು ಹೊಸಕಿಹಾಕಿವೆ. ಶಾರುಖ್, ಸಲ್ಮಾನ್, ಅಮೀರ್ ಖಾನ್‌ಗಳಿಗೆ ಈಗ ವಯಸ್ಸಾಗಿದೆ. ಈಗಲೂ ಅದೇ ನೃತ್ಯ, ಫೈಟ್ ಮಾಡಿದರೆ ಎಷ್ಟೆಂದು ನೋಡುತ್ತಾರೆ. ನಾವು ದಿನಕ್ಕೆ ಮೂರು ಹೊತ್ತು ತಿಂಡಿ–ಊಟ ಮಾಡುತ್ತೇವೆ. ಬೆಳಿಗ್ಗೆ ತಿಂದಿದ್ದನ್ನೇ ರಾತ್ರಿವರೆಗೆ ತಿನ್ನಲು ಇಷ್ಟವಿರುವುದಿಲ್ಲ. ಸಿನಿಮಾ ಕೂಡ ಊಟದಹಾಗೆ. ಆದಕ್ಕೇ ಈಗ ಹಿಂದಿ ಚಿತ್ರರಂಗ ದಕ್ಷಿಣದ ಸಿನಿಮಾಗಳ ಕಡೆಗೆ ನೋಡುತ್ತಿದೆ.

ಮೂಡಿಸಿ, ಹಿಟ್ ಚಿತ್ರ ಹೊಮ್ಮುವಂತೆ ಮಾಡುವುದು ಕಷ್ಟವಾಯಿತು.

'ಕೆಜಿಎಫ್' ಸರಣಿ ಚಿತ್ರಗಳ ನಾಯಕನ ಇಮೇಜಿಗೂ 'ದೀವಾರ್' ಹಿಂದಿ ಸಿನಿಮಾದ ಅಮಿತಾಭ್ ಬಚ್ಚನ್ ಇಮೇಜಿಗೂ ಸಾಮ್ಯವಿದೆ. ಭಾವುಕ ನೆಲೆಗಟ್ಟಿನಲ್ಲಿ ತಾಯಿಯ ಸೆಂಟಿಮೆಂಟಿನ ಕ್ಯಾಪ್ಸೂಲ್ ಒಳಗೆ ಕ್ರೌರ್ಯಕಥನದ ಪುಡಿಯನ್ನು ತುಂಬುವ ಜಾಯಮಾನವನ್ನು ಎರಡೂ ಚಿತ್ರಗಳಲ್ಲಿ ಕಾಣಬಹುದು. ರಾಮ್‌ಗೋಪಾಲ್ ವರ್ಮಾ ಮುಂದುವರಿಸಿದ್ದೂ ಕ್ರೌರ್ಯದ ಹಾದಿಯ ಪಯಣವನ್ನೆ.

'ಬಾಹುಬಲಿ' ಮೊದಲ ಹಾಗೂ ಎರಡನೇ ಭಾಗದ ಚಿತ್ರಗಳಿಗೆ ಹಾಗೂ 'ಆರ್‌ಆರ್‌ಆರ್'ಗೆ ಕಥೆ ಬರೆದ ವಿಜಯೇಂದ್ರ ಪ್ರಸಾದ್ ತಮ್ಮ ಸಿನಿಮಾಗಳನ್ನು ಹಿಂಸಾತ್ಮಕ ಎಂದು ಒಪ್ಪುವುದಿಲ್ಲ. ಅದರಲ್ಲಿ ಜನಪದ ಕಥೆಗಳ ಗುಣಲಕ್ಷಣಗಳೆಲ್ಲ ಇವೆ ಎಂದು ಅವರು ಚಿಂತನೆಯನ್ನು ವಿಸ್ತರಿಸುತ್ತಾರೆ. 'ಸಮಾಜ ಎಂದಮೇಲೆ ಹಿಂಸೆಯೂ ಅದರ ಭಾಗ. ಅದನ್ನು ನಾವು ತೆರೆಮೇಲೆ ಹೇಗೆ ಮೂಡಿಸುತ್ತೇವೆ ಎನ್ನುವುದು ಮುಖ್ಯ. ಆರ್‌ಆರ್‌ಆರ್ ಸಿನಿಮಾಗೂ ಬಾಹುಬಲಿ ಸರಣಿ ಚಿತ್ರಗಳಿಗೂ ಅಜಗಜಾಂತರ. ಎರಡರ ಸಂದರ್ಭಗಳೇ ಬೇರೆ. ವಸ್ತುವಿಷಯಗಳೇ ಬೇರೆ. ಆರ್‌ಆರ್‌ಆರ್‌ನಲ್ಲಿ ಇಬ್ಬರು ಸ್ಟಾರ್ ನಟರನ್ನು ಹಾಕಿಕೊಂಡಾಗ ನಿರ್ದೇಶಕರು, ಕಥೆಗಾರರ ಜವಾಬ್ದಾರಿ ಹೆಚ್ಚುತ್ತದೆ. ಇಬ್ಬರಿಗೂ ಸಮಾನ ಅವಕಾಶವನ್ನು ಸೃಷ್ಟಿಸುತ್ತಾ ಯಾವುದೇ ವಿವಾದಕ್ಕೆ ಎಡೆಮಾಡಿಕೊಡದಂತೆ ದೊಡ್ಡ ಬಜೆಟ್‌ನ ಚಿತ್ರ ಮಾಡುವ ಸೂಕ್ಷ್ಮ ವಿಷಯ ಅದು. ಅದನ್ನು ಜನರೇ ಈಗ ಸರಿಯಾಗಿ ವಿಶ್ಲೇಷಿಸುತ್ತಿದ್ದಾರೆ. ನೋಡುಗರಿಗೆ ರಸಾನುಭವವನ್ನು ಸಿನಿಮಾ ನೀಡಿದೆ' ಎನ್ನುತ್ತಾರೆ ಅವರು. 'ಆರ್‌ಆರ್‌ಆರ್'ನ ಎರಡನೇ ಭಾಗವನ್ನು ಚಿತ್ರೀಕರಿಸುವ ಸಾಧ್ಯತೆಯೂ ಇದೆ ಎಂದು ಅವರು ಮಾತು ಮುಗಿಸಿದರು. ಆದರೆ, ಅದರ ಕಥಾವಿಸ್ತರಣೆಯ ಕುರಿತು ಈಗಲೇ ಏನನ್ನೂ ಹೇಳಲಾಗದು ಎಂದರು.

### ಅಂದೇನು? ಇಂದೇನು?

ದಕ್ಷಿಣ ಭಾರತದ ಸಿನಿಮಾಗಳು ಮದ್ರಾಸಿನಲ್ಲಿ ತಯಾರಾಗುತ್ತಿದ್ದ ಕಾಲದಲ್ಲಿ ಇದ್ದ ಕೊಡು–ಕೊಳುಗಳ ಕಥನವನ್ನು ನೋಡೋಣ. ಆಗ ತಮಿಳು, ತೆಲುಗು,



'ರಾಧೇ' ಸಿನಿಮಾದ ಸಲ್ಮಾನ್ ಖಾನ್ ಬುಲೆಟ್ ಸದ್ದೂ ತೆರೆಯ ಮೇಲೆ ಟುಸ್ ಪಟಾಕಿಯಾಗಿಬಿಟ್ಟಿತಲ್ಲ!